## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 926(1112) |
| ಸದಸ್ಯರ ಹೆಸರು : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 16.12.2025 |
| ಉತ್ತರಿಸುವವರು : | ಪೌರಾಡಳಿತ ಮತ್ತು ಹಜ್ ಸಚಿವರು |

| ಅ. ನಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮರ್ಪಕ ಸಂಖ್ಯೆಯಲ್ಲಿ ಪೌರಸೇವಾ ನೌಕರರು ಇರುವರೇ; ಜಿಲ್ಲಾವಾರು ಮಾಹಿತಿ ಒದಗಿಸುವುದು: | ಇಲ್ಲ,<br><br>ಆದರೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ನೌಕರರ ಕೊರತೆ ಇರುವ ಕಡೆ ಆದ್ಯತೆಗನುಸಾರ ಕೆಲವೊಂದು ಹುದ್ದೆಗಳನ್ನು ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ. |
| ಆ. | ರಾಜ್ಯದಲ್ಲಿ ಪ್ರಸ್ತುತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾದ ಪೌರಸೇವಾ ನೌಕರರ ಹುದ್ದೆಗಳು ಎಷ್ಟು; ಅದರಲ್ಲಿ ಭರ್ತಿ ಮಾಡಿದ ಹುದ್ದೆಗಳು ಎಷ್ಟು; ಬಾಕಿ ಇರುವ ಹುದ್ದೆಗಳು ಎಷ್ಟು; (ವಿವರ ಒದಗಿಸುವುದು) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಮಹಾನಗರಪಾಲಿಕೆ ಹೊರತುಪಡಿಸಿ) ಕಾರ್ಯನಿರ್ವಹಿಸುತ್ತಿರುವ ಪೌರಸೇವಾ ನೌಕರರ ಜಿಲ್ಲಾವಾರು ಮಂಜೂರಾದ, ಭರ್ತಿ ಮಾಡಿದ ಮತ್ತು ಖಾಲಿ ಹುದ್ದೆಗಳ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ. | ಪೌರಸೇವಾ ನೌಕರರ ಕೊರತೆ ಇದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು; (ವಿವರ ಒದಗಿಸುವುದು) | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ನೌಕರರ ಕೊರತೆಯಿದ್ದಲ್ಲಿ ಆದ್ಯತೆಗನುಸಾರ ಕೆಲವೊಂದು ಹುದ್ದೆಗಳನ್ನು ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ. |
| ಈ. | ಪೌರಸೇವಾ ನೌಕರರ ಹುದ್ದೆಗಳನ್ನು ಹೆಚ್ಚಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಹಾಗೂ ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸಹಿಮ 2025, ದಿನಾಂಕ: 03.09.2025ರಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿಯನ್ನು ಕಲ್ಪಿಸಿರುವ ಪರಿಣಾಮವಾಗಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಪರಿಷ್ಕೃತ ಮೀಸಲಾತಿ ರೋಸ್ಟರ್‌ನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನೇರ ನೇಮಕಾತಿಯಡಿ ಖಾಲಿ ಇರುವ ಹುದ್ದೆಗಳನ್ನು ಗುರುತಿಸಲಾಗುತ್ತಿದ್ದು, ಸದರಿ ಹುದ್ದೆಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆದ ನಂತರ ಕರ್ನಾಟಕ ಲೋಕಸೇವಾ ಆಯೋಗಕ್ಕೆ |

| | | |
|---|---|---|
| | | ಪ್ರಸ್ತಾವನೆ ಸಲ್ಲಿಸಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು.<br><br>ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ/ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024, (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಿದ ಹಿನ್ನೆಲೆಯಲ್ಲಿ ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂ: 1554386/DMA/EST2/GRPD/ 31/2024, ದಿನಾಂಕ:23.10.2024ರಲ್ಲಿ 1100 ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ (2022 ರ ಪೌರಕಾರ್ಮಿಕರ ವಿಶೇಷ ನೇಮಕಾತಿ ಅಧಿಸೂಚನೆಯಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ವಯ) ಆಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಮಾಡುವ ಸಂಬಂಧ ಅಗತ್ಯ ಕ್ರಮವಹಿಸಲು ಆದೇಶಿಸಲಾಗಿರುತ್ತದೆ. ಕೋಲಾರ-88 ಮತ್ತು ಉತ್ತರ ಕನ್ನಡ ಜಿಲ್ಲೆ-13 ಸೇರಿ ಒಟ್ಟು-101 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. ಉಳಿದ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ನಿರ್ದೇಶನಾಲಯದ ಸುತ್ತೋಲೆ ಸಂ: 513641/DMA/EST2/OTH//8/2021, ದಿನಾಂಕ: 18.11.2025 ರಲ್ಲಿ ರಾಜ್ಯದ ನಗರಸಭೆಗಳಲ್ಲಿ ನೇರ ಪಾವತಿಯಡಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |

**ಇ-ಸಂಖ್ಯೆ: ನಅಇ 313 ಜಿಇಎಲ್ 2025 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ

| ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಖಾಲಿ ಹುದ್ದೆ ಮಾಹಿತಿ | | | | | | | | | | |
|---|---|---|---|---|---|---|---|---|---|---|
| | | ಖಾಯಂ ನೌಕರರ ಸಂಖ್ಯೆ | | | ಕಾರ್ಯನಿರ್ವಹಿಸುತ್ತಿರುವ ಖಾಯಂ ಅಲ್ಲದ ನೌಕರರ ಸಂಖ್ಯೆ | | | | | |
| ಕ್ರ. ಸಂ. | ಜಿಲ್ಲೆಯ ಹೆಸರು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ದಿನಗೂಲಿ/ ಕ್ಷೇಮಾಭಿವೃದ್ಧಿ | ಸಮಾನ ಕೆಲಸಕ್ಕೆ ಸಮಾನ ವೇತನ | ಗುತ್ತಿಗೆ | ಹೊರ ಗುತ್ತಿಗೆ | ನೇರ ಪಾವತಿ | ಒಟ್ಟು |
| 1 | ಬೆಂಗಳೂರು ನಗರ | 1480 | 374 | 1106 | 0 | 1 | 43 | 344 | 51 | 439 |
| 2 | ಬೆಂಗಳೂರು ಗ್ರಾಮಾಂತರ | 974 | 429 | 545 | 40 | 20 | 5 | 313 | 112 | 490 |
| 3 | ಬೆಂಗಳೂರು ದಕ್ಷಿಣ | 975 | 442 | 533 | 18 | 2 | 4 | 222 | 69 | 315 |
| 4 | ಕೋಲಾರ | 1403 | 519 | 884 | 42 | 10 | 30 | 245 | 140 | 467 |
| 5 | ಚಿಕ್ಕಬಳ್ಳಾಪುರ | 1081 | 353 | 728 | 52 | 38 | 6 | 190 | 82 | 368 |
| 6 | ತುಮಕೂರು | 1075 | 538 | 537 | 4 | 5 | 8 | 317 | 43 | 377 |
| 7 | ಚಿತ್ರದುರ್ಗ | 1169 | 486 | 683 | 15 | 9 | 9 | 292 | 49 | 374 |
| 8 | ದಾವಣಗೆರೆ | 646 | 336 | 310 | 0 | 0 | 8 | 124 | 52 | 184 |
| 9 | ಶಿವಮೊಗ್ಗ | 1196 | 496 | 700 | 6 | 0 | 8 | 441 | 108 | 563 |
| 10 | ಮೈಸೂರು | 1504 | 686 | 818 | 18 | 1 | 11 | 475 | 108 | 613 |
| 11 | ಚಾಮರಾಜನಗರ | 669 | 255 | 414 | 3 | 18 | 10 | 198 | 73 | 302 |
| 12 | ಮಂಡ್ಯ | 1059 | 463 | 596 | 19 | 2 | 5 | 291 | 99 | 416 |
| 13 | ಕೊಡಗು | 416 | 149 | 267 | 10 | 0 | 2 | 144 | 15 | 171 |
| 14 | ಹಾಸನ | 1168 | 640 | 528 | 25 | 0 | 9 | 713 | 1 | 748 |
| 15 | ದಕ್ಷಿಣ ಕನ್ನಡ | 1149 | 355 | 794 | 17 | 11 | 10 | 213 | 96 | 347 |
| 16 | ಚಿಕ್ಕಮಗಳೂರು | 863 | 371 | 492 | 4 | 0 | 6 | 329 | 131 | 470 |
| 17 | ಉಡುಪಿ | 798 | 400 | 398 | 19 | 10 | 3 | 158 | 17 | 207 |
| 18 | ಬೆಳಗಾವಿ | 3125 | 1262 | 1863 | 5 | 25 | 39 | 612 | 103 | 784 |
| 19 | ವಿಜಯಪುರ | 1006 | 559 | 447 | 19 | 32 | 17 | 156 | 10 | 234 |
| 20 | ಬಾಗಲಕೋಟೆ | 2071 | 961 | 1110 | 0 | 2 | 23 | 596 | 25 | 646 |
| 21 | ಧಾರವಾಡ | 363 | 195 | 168 | 5 | 2 | 5 | 85 | 1 | 98 |
| 22 | ಗದಗ | 1157 | 528 | 629 | 86 | 28 | 14 | 307 | 7 | 442 |
| 23 | ಹಾವೇರಿ | 1240 | 530 | 710 | 7 | 6 | 16 | 356 | 107 | 492 |
| 24 | ಉತ್ತರ ಕನ್ನಡ | 1431 | 563 | 868 | 31 | 47 | 14 | 371 | 21 | 484 |
| 25 | ಕಲಬುರಗಿ | 1156 | 576 | 580 | 26 | 2 | 23 | 192 | 1 | 244 |
| 26 | ಬೀದರ್ | 1329 | 566 | 763 | 13 | 0 | 11 | 428 | 27 | 479 |
| 27 | ಯಾದಗಿರಿ | 1046 | 509 | 537 | 14 | 0 | 11 | 148 | 62 | 235 |
| 28 | ರಾಯಚೂರು | 1636 | 904 | 732 | 331 | 31 | 16 | 173 | 140 | 691 |
| 29 | ಕೊಪ್ಪಳ | 1069 | 453 | 616 | 177 | 12 | 7 | 202 | 83 | 481 |
| 30 | ಬಳ್ಳಾರಿ | 845 | 327 | 518 | 0 | 0 | 33 | 167 | 0 | 200 |
| 31 | ವಿಜಯನಗರ | 1186 | 689 | 497 | 0 | 0 | 0 | 29 | 57 | 86 |
| ಒಟ್ಟು | | **36285** | **15914** | **20371** | **1006** | **314** | **406** | **8831** | **1890** | **12447** |